# -* ಸದ್ಭಾವನ ದಿನದ ವರದಿ *-

ದಿನಾಂಕ 24-08-2019 ರ ಮಂಗಳವಾರದಂದು ಶಾಂತಿ ಕಲಾ,ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಒಳಾಂಗಣದಲ್ಲಿ ಪದವಿ ಕಾಲೇಜಿನಲಿರುವ ರಾಷ್ಟ್ರೀಯ ಸೇವಾ ಯೋಜನೆಯ ಎರಡು ಘಟಕಗಳ ಮತ್ತು ಪದವಿಪೂರ್ವ ಕಾಲೇಜಿನ ಒಂದು ಘಟಕದ ಸಹಯೋಗದೊಂದಿಗೆ ರಾಷ್ಟ್ರೀಯ ಸದ್ಭಾವನ ದಿನವನ್ನು ಆಚರಿಸಲಾಯಿತು.

ಈ ಕರ್ಯಕ್ರಮದಲ್ಲಿ ಪದವಿ,ಪದವಿಪೂರ್ವ ಕಾಲೇಜಿನ ಅಧ್ಯಾಪಕರು ಹಾಜರಿದ್ದರು. ಅಧ್ಯಕ್ಷತೆಯನ್ನು ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ॥ ಸಿ.ನಾಗರಾಜು ರವರು ವಹಿಸಿದ್ದರು.

ಈ ಕರ್ಯಕ್ರಮದಲ್ಲಿ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಯಾದ ಶ್ರೀ ಬಿ.ಯೋಗಾನಂದರವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ, ಸದ್ಭಾವನೆಗೋಸ್ಕರ ಮಾಜಿ ಪ್ರಧಾನಿಗಳಾದ ದಿ.ರಾಜೀವ್ ಗಾಂಧಿ ಯವರ ಬಲಿದಾನ ಹಾಗು **'ಮಾನವ ಸಂಕುಲ ತನ್ನ ಉಳಿವಿಗಾಗಿ ಸದ್ಭಾವನೆ ಹೊಂದಲೇಬೇಕು'** ಎಂಬ ವಿಚಾರವನ್ನು ಕುರಿತು ಮಾತನಾಡಿದರು. ಇದೇ ಸಂದರ್ಭದಲ್ಲಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶಿವಪ್ಪನವರು ವಿದ್ಯಾರ್ಥಿಗಳಿಗೆ ಸದ್ಭಾವನಾ ವಿಧಿಯನ್ನು ಬೋಧಿಸಿದರು. ಅಧ್ಯಕ್ಷತೆ ವಹಿಸಿದ್ದ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ॥ ಸಿ.ನಾಗರಾಜು ರವರು ವಿದ್ಯಾರ್ಥಿಗಳಿಗೆ ಸದ್ಭಾವನೆಯ ರಾಭಾರಿಗಳಾಗಿ ರಾಜೀವ್ ಗಾಂಧಿಯುವರ ಕನಸನು ನನಸು ಮಾಡಬೇಕೆಂದು ತಿಳಿಸಿದರು. ನಂತರ ರಾಜ್ಯ ಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಸಿದ್ದರಾಜುರವರು ಗಣ್ಯರಿಗೆ ವಂದನಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮದ ಯಸಸ್ಸಿಗೆ ಕಾರಣರಾದರು.

---*******---

ಪ್ರಾಂಶುಪಾಲರು
ಶಾಂತಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು
ಮಳವಳ್ಳಿ - 571 430.



Scanned by CamScanner